# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1101 (1272) |
| ಮಾನ್ಯ ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್<br>(ವಿಧಾನ ಸಭಾ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13/03/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | 2024-25ನೇ ಸಾಲಿನಲ್ಲಿ Menstrual Cupಗಳನ್ನು ಮಾತ್ರವೇ ಫಲಾನುಭವಿಗಳಿಗೆ ನೀಡುವುದರಿಂದ ಆ ಫಲಾನುಭವಿಗಳಿಗೆ ಆಗುವ ಲಾಭವೇನು; ಒಬ್ಬ ಫಲಾನುಭವಿಗೆ ಒಂದು ಬಾರಿ ನೀಡಲಾದ Menstrual Cup ಎಷ್ಟು ಬಾರಿ ಬಳಕೆ ಮಾಡಬಹುದು ಹಾಗೂ ಈ ಕಾರ್ಯಕ್ರಮ ಎಷ್ಟು ವರ್ಷ ಜಾರಿಯಲ್ಲಿರುತ್ತದೆ; (ಸಮಗ್ರ ವಿವರ ನೀಡುವುದು) | ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ವತಿಯಿಂದ ನೋಂದಾಯಿತ ಮಹಿಳಾ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ Menstrual Cup ಯೋಜನೆಯನ್ನು ಜಾರಿ ಮಾಡಲು ಉದ್ದೇಶಿಸಲಾಗಿರುತ್ತದೆ. ಇದರಿಂದ ಮಹಿಳಾ ಕಾರ್ಮಿಕರು ಋತುಸ್ರಾವದ ಸಂದರ್ಭದಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಮತ್ತು ಆರ್ಥಿಕವಾಗಿ ಸಹಾಯ ಮಾಡಿದಂತಾಗುತ್ತದೆ. ಅಲ್ಲದೇ, ಇದು ಪರಿಸರ ಸ್ನೇಹಿಯಾಗಿರುತ್ತದೆ.<br><br>Menstrual Cupಗಳನ್ನು ಒಬ್ಬ ಫಲಾನುಭವಿಗೆ ಒಂದು ಬಾರಿ ಮಾತ್ರ ನೀಡಲು ಉದ್ದೇಶಿಸಲಾಗಿರುತ್ತದೆ. ಇದನ್ನು ಸುಮಾರು ವರ್ಷಗಳ ಕಾಲ ಸಮರ್ಪಕವಾಗಿ ನಿರ್ವಹಣೆ ಮಾಡುವ ಮೂಲಕ ಬಳಕೆ ಮಾಡಬಹುದಾಗಿರುತ್ತದೆ.<br><br>ಪ್ರಸ್ತುತ ಈ ಯೋಜನೆಯನ್ನು 2024-25ನೇ ಸಾಲಿನ ಮಂಡಳಿಯ ಆಯವ್ಯಯದನ್ವಯ ಅನುಷ್ಠಾನ ಮಾಡಲು ಮಾತ್ರ ಮಂಡಳಿಯಲ್ಲಿ ಅನುಮೋದನೆ ದೊರೆತಿರುತ್ತದೆ. |
| ಆ) | ರೂ. 55 ರಿಂದ ರೂ.88 ಕ್ಕೆ ತೆರೆದ ಮಾರುಕಟ್ಟೆಯಲ್ಲಿ ದೊರೆಯುವ ಉತ್ತಮ ಗುಣಮಟ್ಟದ BIS ಸ್ಟ್ಯಾಂಡರ್ಡ್ Menstrual cup ಅನ್ನು ರೂ.280 ಕ್ಕೂ ಹೆಚ್ಚು ಬೆಲೆ ನೀಡಿ ಖರೀದಿಸುವಲ್ಲಿ ಭ್ರಷ್ಟಾಚಾರವಾಗಿರುವ ಕುರಿತು ಸರ್ಕಾರದ ನಿಲುವೇನು; (ವಿವರ ನೀಡುವುದು) | ಮಂಡಳಿಯಿಂದ ಖರೀದಿಸಲು ಉದ್ದೇಶಿಸಲಾಗಿದ್ದು, Menstrual Cup ಕಿಟ್‌ನಲ್ಲಿ 01 Menstrual Cup, Textile Pouch, Collapsible Silicon Sterilizer and User guide in English and Kannada ಒಳಪಡುವ ಕಿಟ್‌ನ ಖರೀದಿಗೆ ರೂ.280/- (ಎಲ್ಲಾ ತೆರಿಗೆಗಳು ಸೇರಿ) ಎಂದು ಅಂದಾಜಿಸಲಾಗಿದೆ.<br><br>ಇದಲ್ಲದೇ, Menstrual Cup ಬಳಕೆಯ ಬಗ್ಗೆ ಅರಿವು ಹಾಗೂ ಐಇಸಿ ಚಟುವಟಿಕೆಗಳನ್ನು ನಡೆಸಲು ಆಯ್ಕೆಯಾದ ಸಂಸ್ಥೆಯು ರಾಜ್ಯಾದ್ಯಂತ ಅರ್ಹ ಫಲಾನುಭವಿಗಳ ತಂಡವನ್ನು ರಚಿಸಿ ಅವರಿಗೆ Menstrual Cup ಬಳಕೆಯ ಬಗ್ಗೆ ಅರಿವು ಮೂಡಿಸಬೇಕಾಗಿರುತ್ತದೆ. ಹೀಗೆ ಕ್ಯಾಂಪ್ ಅನ್ನು ನಡೆಸುವ ಸಂಸ್ಥೆಯು ಹೆಲ್ತ್ ಕೇರ್ ಸಂಸ್ಥೆಯಾಗಿದ್ದು, |

| | | |
|---|---|---|
| | | ಸದರಿ ಸಂಸ್ಥೆಯಲ್ಲಿ ಇಬ್ಬರು ಸ್ತ್ರೀರೋಗ ತಜ್ಞರು ಹಾಗೂ 10 ಮಹಿಳಾ ನರ್ಸ್‌ಗಳು ಕಡ್ಡಾಯವಾಗಿ ಇರತಕ್ಕದ್ದು. 200 ಫಲಾನುಭವಿಗಳನ್ನೊಳಪಡಿಸಿ ತಂಡವನ್ನು ರಚಿಸಿ ತರಬೇತಿ ನೀಡಲು ಪ್ರತಿ ಕ್ಯಾಂಪ್‌ಗೆ ರೂ.47,200/- (ಎಲ್ಲಾ ತೆರಿಗೆಗಳು ಸೇರಿ) ಗಳನ್ನು ನಿಗಧಿಪಡಿಸಲಾಗಿರುತ್ತದೆ. |
| ಇ) | Menstrual cup ಬಳಕೆಯ ಕುರಿತು ಇದುವರೆಗೆ ಎಷ್ಟು ತರಬೇತಿ ಶಿಬಿರಗಳನ್ನು ಆಯೋಜಿಸಲಾಗಿದೆ; ತರಬೇತಿ ನೀಡಲು ಯಾವ ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ; ತರಬೇತಿ ಪಡೆದ ಮಹಿಳೆಯರ ಮತ್ತು ಫಲಾನುಭವಿಗಳ ಆಧಾರ್ ಕಾರ್ಡ್ ಹಾಗೂ ಲೇಬರ್ ಕಾರ್ಡ್ ಜೋಡಣೆ ಕುರಿತು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | Menstrual cup ಯೋಜನೆ ಅನುಷ್ಠಾನಕ್ಕಾಗಿ ಕರೆದಿದ್ದ ಇ-ಟೆಂಡರ್ ಗಳನ್ನು ರದ್ದುಪಡಿಸಿದ ಹಿನ್ನೆಲೆಯಲ್ಲಿ ಯಾವುದೇ ತರಬೇತಿ ಶಿಬಿರಗಳನ್ನು ಆಯೋಜಿಸಿರುವುದಿಲ್ಲ. |
| ಈ) | ನಾಗರಿಕ ಸಮಾಜದ ಸಾಮಾನ್ಯ ಮಹಿಳೆಯರೇ ಬಳಸಲು ಹಿಂಜರಿಯುವ Menstrual cup ಅನ್ನು ಕಾರ್ಮಿಕ ಮಹಿಳೆಯರ ಖರೀದಿಸುತ್ತಿರುವ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ಮಹಿಳಾ ಕಾರ್ಮಿಕರ ಆರೋಗ್ಯದ ಹಿತದೃಷ್ಟಿಯಿಂದ Menstrual Cup ಯೋಜನೆಯನ್ನು ಜಾರಿ ಮಾಡಲು ಉದ್ದೇಶಿಸಲಾಗಿದ್ದು, ಇದರಿಂದ ಮಹಿಳಾ ಕಾರ್ಮಿಕರು ಋತುಸ್ರಾವದ ಸಂದರ್ಭದಲ್ಲಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಲು ಮತ್ತು ಆರ್ಥಿಕವಾಗಿ ಸಹಾಯ ಮಾಡಿದಂತಾಗುತ್ತದೆ. ಅಲ್ಲದೇ, ಇದು ಪರಿಸರ ಸ್ನೇಹಿಯಾಗಿರುತ್ತದೆ. ಈ Menstrual cup ಅನ್ನು ನೋಂದಾಯಿತ ಮಹಿಳಾ ಕಾರ್ಮಿಕರಿಗೆ ಮಂಡಳಿಯವತಿಯಿಂದ ಉಚಿತವಾಗಿ ನೀಡಲಾಗುತ್ತದೆ. |

**ಕಾಇ 102 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**